**ಸಾಕ್ಷಿಗೆ ದಿನಾಂಕಃ 07.03.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ಶ್ರೀ. ವಿ ಆರ್ ಎನ್ ವಕೀಲರಿಂದ ಃ**

ನಿಪಿ 9 ನ್ನು ರತ್ನರಾಜಿ ಬರವಣಿಗೆ ಮಾಡಿರುತ್ತಾರೆ. ನಿಪಿ 9 ನ್ನು ರತ್ನರಾಜ್ ವಕೀಲರು ಟೈಪ್ ಮಾಡಿರುತ್ತಾರೆ. ರತ್ನರಾಜ್ ವಕೀಲರಿಗೆ ಬೆರಳಚ್ಚು ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ಅವರು ನನಗೆ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ 9 ಮಾಡುವ ಕಾಲಕ್ಕೆ ನನ್ನ ತಂದೆಯ ತಾಯಿ ಆದ ಕುಲ್ಸುಂಬಿ ಬದುಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ನ್ನು ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ 9 ಬರೆಯುವ ಕಾಲಕ್ಕೆ ನನ್ನ ತಂದೆಗೆ 75 ವರ್ಷ ಆಗಿರುತ್ತದೆ ಎಂದರೆ ಸರಿಯಲ್ಲ.ಆ ಸಮಯದಲ್ಲಿ ನನ್ನ ತಂದೆಗೆ ಸುಮಾರು 78 ವರ್ಷ ಆಗಿರಬಹುದು. 2 ನೇ ಪ್ರತಿವಾದಿಗೂ ಮತ್ತು ನಿಮಗೆ ಎಷ್ಟು ವರ್ಷದಿಂದ ವೈ ಮನಸ್ಸು ಇದೆ ಎಂದರೆ ಸಾಕ್ಷಿ ಆ ರೀತಿ ವೈ ಮನಸ್ಸು ಇರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸಲ್ಲಿಸುವಾಗಲೂ ಇರಲಿಲ್ಲ. ದಾವಾ ಸಲ್ಲಿಸಿದ ನಂತರವೂ ಸಹ 2 ನೇ ಪ್ರತಿವಾದಿ ನನ್ನ ಜೊತೆ ಮಾತನಾಡುತ್ತಾರೆ. ಸಾಕ್ಷಿ ಮುಂದುವರೆದು ಅವರು ಭಾಗ ಕೊಡುತ್ತೇವೆಂದು ಮೋಸ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ 11 ವಂಶವೃಕ್ಷ 2 ನೇ ಪ್ರತಿವಾದಿ ಮಾಡಿದ್ದು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿದ GPA ನಿಪಿ 1 ರಲ್ಲಿ ನನ್ನ ತಂದೆಯ ವಯಸ್ಸು 93 ವರ್ಷ ಎಂದು ತೋರಿಸಲಾಗಿದೆ ಎಂದರೆ ಸರಿ.

ನಿಪಿ 9 ರಲ್ಲಿ ಕುಲ್ಸುಂಬಿ ರವರ ವಯಸ್ಸು 65 ಎಂದು ತೋರಿಸಲಾಗಿದೆ ಎಂದರೆ ಸರಿ. ನಿಪಿ 1 ಮತ್ತು 9 ರಲ್ಲಿ ಕುಲ್ಸುಂಬಿ ರವರ ವಯಸ್ಸು ನನ್ನ ತಂದೆಗೆ ಹೋಲಿಸಿದಾಗ ವ್ಯತ್ಯಾಸ ನನ್ನ ಅಜ್ಜಿ ಕುಲ್ಸುಂಬಿ ಮತ್ತು ತಂದೆ ಮಹಮ್ಮದ್

ಯೂಸೂಫ್ ಮಧ್ಯೆ 5 ವರ್ಷ ಅಂತರ ಬರುತ್ತದೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 9 ನ್ನು ಸೃಷ್ಟಿ ಮಾಡಿಕೊಂಡು ನಾನು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ದಾವಾ ಸ್ವತ್ತು NH169 ಶೃಂಗೇರಿ ಹೈವೆ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನ್ಯಾಷನಲ್ ಹೈವೆ ಅಗಲ ಆಗುತ್ತಿದ್ದು, ಸದರಿ ಅಗಲೀಕರಣದಲ್ಲಿ ದಾವಾ ಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ.

ಸದರಿ ರಸ್ತೆ ಅಗಲೀಕರಣದಲ್ಲಿ ದಾವಾ ಆಸ್ತಿ ಮುಕ್ಕಾಲು ಭಾಗ ಹೋಗುತ್ತಿದ್ದು ಪರಿಹಾರಕ್ಕಾಗಿ ಪ್ರತಿವಾದಿ 1(ಇ) ಕೈರೋನೀಸಾ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮನೆಯನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಅದರ ಎದುರುಗಡೆ ತೆಂಗಿನ ಮರ ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ಇರುವ ಮನೆ 35 ವರ್ಷ ಆಗಿರುತ್ತದೆ. ದಾವಾ ಸ್ವತ್ತಿನಲ್ಲಿ ನನಗಾಗಲೀ, ನನ್ನ ತಂದೆಗಾಗಲೀ, ನನ್ನ ತಾಯಿಗಾಗಲೀ, ವಾದಿಗಳಿಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಖಾತೆ ಈಗ ಅನಿಫಾ ಹೆಸರಿನಲ್ಲಿ ಇರುತ್ತದೆ ಎಂದರೆ ಮೋಸ ಮಾಡಿ ಮಾಡಿಕೊಂಡಿರುತ್ತಾರೆ. ಖಾತೆ ಬದಲಾವಣೆ ಸಂಬಂಧ ನಾನು ಯಾವುದೇ appeal ಸಲ್ಲಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಭಾಗ ಕೊಡುತ್ತೇವೆಂದು ಮೋಸ ಮಾಡಿರುತ್ತಾರೆ ಎಂದು ನುಡಿದಿರುತ್ತೇನೆ. ನಾವು ಯಾವುದೇ ಭಾಗ ಕೇಳಿರುವುದಿಲ್ಲ, ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ನನ್ನ ತಂದೆ ದಾವಾ ಆಸ್ತಿಯು ಅವರ ತಂದೆ ಪೀರು ಸಾಹೇಬ್ ಗೆ ಸೇರಿರುತ್ತದೆ ಎಂದು ಅರ್ಜಿಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಸಲ್ಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆ ನಿಪಿ 3 ನಮ್ಮ ಮನೆಯಲ್ಲಿ ಇತ್ತು. ಸದರಿ ನಿಪಿ 3 ನ್ನು ನಾನು ಓದಿರುವುದಿಲ್ಲ. ಸದರಿ ನಿಪಿ 3 ರಲ್ಲಿ ವಿಲ್ ನ ದಿನಾಂಕ ಮತ್ತು ಕುಲ್ಸುಂಬಿ ಮರಣ ದಿನಾಂಕ ತಿದ್ದು ಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ನನ್ನ

ತಂದೆ ಅವರ ತಂದೆ ಪೀರು ಸಾಹೇಬ್ ಗೆ ಸೇರಿದ ಆಸ್ತಿ ಎಂದು ಹೇಳಿದ್ದರಿಂದ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಇಬ್ರಾಹಿಂ ಸಾಹೇಬ್ ತಂದೆ ಇಮಾಮ್ ಸಾಹೇಬ್ ರವರಿಗೆ ಸೇರಿದ ದಾವಾ ಆಸ್ತಿ ಎಂದರೆ ಸರಿಯಲ್ಲ. ಕುಲ್ಸುಂಬಿ ಅವರ ಗಂಡ ಇಮಾಮ್ ಸಾಹೇಬ್ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಪೀರು ಸಾಹೇಬ್ ಎನ್ನುವವರು ಇನ್ನೊಬ್ಬ ಗಂಡ ಇದ್ದಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯು ಇಮಾಮ್ ಸಾಹೇಬ್ ಗೆ ಸಂಬಂಧ ಪಟ್ಟಿದ್ದಾಗಿರುತ್ತದೆ, ಕುಲ್ಸುಂಬಿ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ತೋರಿಸಿರುವಂತೆ ದಾವಾ ಆಸ್ತಿ ಪೀರು ಸಾಹೇಬ್ ಸಂಬಂಧಪಟ್ಟಿದ್ದಲ್ಲ ಎಂದರೆ ಸಾಕ್ಷಿ ಪೀರು ಸಾಹೇಬ್ ಹೆಂಡತಿ ಕುಲ್ಸುಂಬಿ ಆಗಿದ್ದು ದಾವಾ ಆಸ್ತಿ ಕುಲ್ಸುಂಬಿ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ 5 ಪತ್ರಿಕೆಯಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪ ಪ್ರಕಟಣೆ ನೀಡಿರುತ್ತಾರೆ. ನಿಪಿ 5 ಪ್ರಕಟಣೆ ನಾನೇ ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲದೇ ಇರುವುದರಿಂದ ನಾನು ಸಕಾಲದಲ್ಲಿ ಯಾವುದೇ ಭಾಗ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**(ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)**

**(ದಿನಾಂಕಃ 07.03.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**